ಎಂ.ವಿ.ಸಿ. ಸಂಖ್ಯೆ 106/2022

**ದಿನಾಂಕಃ 23.10.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಹೆಚ್.ಕೆ. ಅರ್ಜಿದಾರರ ಪರ ವಕೀಲರಿಂದಃ**

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಅಪರಾಧ ಸಂಖ್ಯೆ 181/2020 ರ ಪ್ರಥಮ ವರ್ತಮಾನ ವರದಿ, ಆ ಪ್ರಕರಣದಲ್ಲಿ ಸಲ್ಲಿಸಿದ ದೂರು, ಸ್ಥಳ ಪಂಚನಾಮ, ಕಚ್ಚಾ ನಕಾಶೆ, ಎಂ.ವಿ.ಎ ವರದಿ, ಗಾಯದ ಪ್ರಮಾಣ ಪತ್ರ, ಅಮಾನತ್ತು ಪಂಚನಾಮ, ದೋಷಾರೋಪಣಾ ಪಟ್ಟಿ ಸಿ.ಸಿ. ಸಂಖ್ಯೆ 44/2021 ರ ಆದೇಶದ ಪುಟದ ದೃಢೀಕೃತ ಪ್ರತಿಗಳು, ಆಸ್ಪತ್ರೆ ಬಿಡುಗಡೆ ಪತ್ರ, 37 ವೈದ್ಯಕೀಯ ಬಿಲ್ಲುಗಳು ಮತ್ತು 21 ವೈದ್ಯಕೀಯ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.1 ರಿಂದ 12 ಎಂದು ಗುರುತಿಸಲಾಯಿತು.

**ಈ ಮೂಲಕ ನನ್ನ ಸಾಕ್ಷ್ಯವನ್ನು ಅಂತ್ಯಗೊಳಿಸಿದ್ದು, ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥನೆ.**

**ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**